CFC.R.P.67 ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

**S.C No.: 25/2017**

Form No.4(Civil)
(R.P.No.57)

ಪಿ.ಡಬ್ಲ್ಯೂ ನಂಃ 07
ಸಿ.ಡಬ್ಲ್ಯೂ ನಂಃ 12
ಸಾಕ್ಷಿಯನ್ನು ದಿನಾಂಕಃ 08-02-2024
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಶಿವಪ್ಪ |
| ತಂದೆಯ ಹೆಸರು | ಃ | ಫಕೀರಪ್ಪ |
| ವಯಸ್ಸು | ಃ | 32 ವರ್ಷ |
| ಉದ್ಯೋಗ | ಃ | ಆಟೋ ಚಾಲಕ |
| ವಾಸ ಸ್ಥಳ | ಃ | ವಣಗೇರಿ |

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

2016 ರಲ್ಲಿ ನಾನು ಟಂಟಂ ವಾಹನ ಚಲಾಯಿಸುತ್ತಿದ್ದೆ. ಶಾಲಾ ಮಕ್ಕಳನ್ನು ಕರೆದುಕೊಂಡು ಹೋಗಿ ವಾಪಸ್ ಮನೆಗೆ ಕರೆದುಕೊಂಡು ಬಿಡುವ ಕೆಲಸ ಮಾಡುತ್ತಿದ್ದೆ. ಈ ಮಧ್ಯ ನನ್ನ ವಾಹನದಲ್ಲಿ ಪ್ರಯಾಣಿಕರನ್ನು ಸಹಾ ಕರೆದುಕೊಂಡು ಹೋಗಿ ಬರುತ್ತಿದ್ದೆ. ನನಗೆ ಮೃತ ಮಂಜುಳಾಳ ಪರಿಚಯವಿತ್ತು. ಅವರು ನನ್ನ ವಾಹನದಲ್ಲಿ ಅಡ್ಡಾಡುತ್ತಿದ್ದರು. ನನ್ನ ಬಳಿ ಚಾಲನಾ ಪರವಾನಿಗೆ ಇರುವುದಿಲ್ಲ ಎಂದು ಮಂಜುಳಾ ರವರಿಗೆ ಹೇಳಿದಾಗ ಫೋಟೋ ಕೊಟ್ಟರೆ ಮಾಡಿಸಿಕೊಡುವುದಾಗಿ ಹೇಳಿದ್ದರು. ಆಕೆಗೆ ನಾನು ನನ್ನ ಫೋಟೋಗಳನ್ನು ಕೊಟ್ಟಿದ್ದೆ.

2). ದಿಃ 17-3-2016 ರಂದು ಪೊಲೀಸರು ನನ್ನನ್ನು ಠಾಣೆಗೆ ಕರೆಸಿದ್ದರು. ನನ್ನ ಹಾಗೂ ಮಂಜುಳಾರವರ ಫೋಟೋಗಳನ್ನು ತೋರಿಸಿ ವಿಚಾರಿಸಿದಾಗ ನಾನು ಆಕೆಯ ಫೋಟೋ ನೋಡಿ ಗುರುತು ಹಿಡಿದು ಆಕೆಯ ಬಳಿ ನನ್ನ ಫೋಟೋ ಪರವಾನಿಗೆ ಮಾಡಿಸಲು ಕೊಟ್ಟ ವಿಚಾರವನ್ನು ತಿಳಿಸಿದ್ದೆ. ಸಾಕ್ಷಿದಾರರು ಗುರುತಿಸಿದ ಫೋಟೋಗಳು ಮುದ್ದೆಮಾಲು -5 ಮತ್ತು 6 ಇವುಗಳನ್ನು ಗುರುತಿಸಿದ್ದಾರೆ.

3). ದಿಃ 19-4-2016 ರಂದು ಪುನಃ ಪೊಲೀಸರು ನನ್ನನ್ನು ಕರೆಸಿದ್ದು, ಆಗ ಆರೋಪಿಗಳಿಬ್ಬರು ಠಾಣೆಯಲ್ಲಿದ್ದರು. ಪೊಲೀಸರು ಅವರನ್ನು ವಿಚಾರಿಸಿದಾಗ ದಿಃ 16-3-2016 ರಂದು ಕುಷ್ಟಗಿಯಲ್ಲಿ ಗುಂಡಮ್ಮ ಮಾಡಿದ ರೂಮಿಗೆ ಮಂಜುಳಾರವರನ್ನು ಕರೆಸಿಕೊಂಡು ಆಕೆಗೆ ಸ್ಪೈಟ್ ನಲ್ಲಿ ನಿದ್ದೆ ಮಾತ್ರೆ ಹಾಕಿ ಆಕೆ ಮಲಗಿದ ಮೇಲೆ ಆಕೆಯ ಕುತ್ತಿಗೆಗೆ ಟವೆಲ್ಲನ್ನು ಬಿಗಿದು ಕೊಲೆ ಮಾಡಿ ಪರಸಪ್ಪನನ್ನು ಕರೆಸಿಕೊಂಡು

ಶವವನ್ನು ಮೋಟರ ಸೈಕಲ್ಲನಲ್ಲಿ ತೆಗೆದುಕೊಂಡು ಹೋಗಿ ಕುರುಬನಾಳ ಸೀಮಾದ ಹತ್ತಿರ ಸುಟ್ಟ ವಿಚಾರ ಹೇಳಿದರು.

4). ಗುಂಡಮ್ಮ ಈ ಹಿಂದೆ ಆಶಾ ಕಾರ್ಯಕರ್ತೆ ಹುದ್ದೆಗೆ ಅರ್ಜಿ ಹಾಕಿದಾಗ ಮಂಜುಳಾ ತಾನೊಬ್ಬಳೇ ಆಶಾ ಕಾರ್ಯಕರ್ತೆ ಆಗಬೇಕೆಂದು ಗುಂಡಮ್ಮ ಹಾಕಿದ ಅರ್ಜಿ ಮಾನ್ಯವಾಗದಂತೆ ಮಾಡಿರುತ್ತಾಳೆ ಎಂದು ಆಕೆಯ ಮೇಲೆ ಗುಂಡಮ್ಮನಿಗೆ ಸಿಟ್ಟು ಬಂದು ಆಕೆಯನ್ನು ಕೊಲೆ ಮಾಡಿರುತ್ತಾಳೆ ಎಂದು ಗೊತ್ತಾಯಿತು. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ. ಆರೋಪಿಗಳಾದ ಗುಂಡಮ್ಮ ಮತ್ತು ಪರಸಪ್ಪ ಈಗ ನ್ಯಾಯಾಲಯದಲ್ಲಿದ್ದಾರೆ.

ಪಾಟೀ ಸವಾಲು : 1 ನೇ ಆರೋಪಿ ಪರ ವಕೀಲರಿಂದ

5). ನಾನು 4 ನೇ ತರಗತಿವರೆಗೆ ಓದಿದ್ದೇನೆ. 2015 ರಿಂದ ನಾನು ವಾಹನ ಚಲಾಯಿಸುತ್ತಿದ್ದೇನೆ. ಮೊದಲು ನನಗೆ ವಾಹನ ಓಡಿಸಲು ಪರವಾನಿಗೆ ಇರಲಿಲ್ಲ, ಆಗಸ್ಟ 2016 ರಲ್ಲಿ ಕೊಪ್ಪಳದಲ್ಲಿ ಪರವಾನಿಗೆ ಮಾಡಿಸಿಕೊಂಡಿದ್ದೇನೆ. ಪರವಾನಿಗೆ ಇಲ್ಲದೇ ವಾಹನ ಚಲಾಯಿಸುವುದು ತಪ್ಪು ಎಂದರೆ ಸರಿ. ನನ್ನ ಫೊಟೋ ಲೈಸನ್ಸ ಮಾಡಿಸಲು ಮಂಜುಳಾರವರಿಗೆ ಕೊಟ್ಟಿದ್ದೆ. ಒಟ್ಟು 2 ಫೊಟೋಗಳನ್ನು ಕೊಟ್ಟಿದ್ದೆ. ಮುದ್ದೆಮಾಲು-6 ಒಂದೇ ಫೊಟೋ ಇದೆ ಎಂದರೆ ಸರಿ. ಫೊಟೋಗಳನ್ನು ಹೊರತುಪಡಿಸಿ ಅವರಿಗೆ ಬೇರೆ ಯಾವುದೇ ದಾಖಲೆ ಕೊಟ್ಟಿರಲಿಲ್ಲ.

6). ಈ ಕೇಸಿಗೆ ಸಂಬಂಧಪಟ್ಟಂತೆ ನಾನು ಪೊಲೀಸ ಠಾಣೆಗೆ 2 ಬಾರಿ ಹೋಗಿದ್ದೆ. ಕೊಲೆ ಮಾಡಿದ ಜಾಗದಲ್ಲಿ ಮುದ್ದೆಮಾಲು-5 ಮತ್ತು 6 ಫೊಟೋಗಳು ಬಿದ್ದಿದ್ದವು ಎಂದು ಪೊಲೀಸರು ಹೇಳಿದ್ದರು. ಗುಂಡಮ್ಮ ಆಶಾ ಕಾರ್ಯಕರ್ತೆಯಾಗುವುದನ್ನು ಮಂಜುಳಾ ತಪ್ಪಿಸಿದ್ದಳು ಎಂದು 1 ನೇ ಆರೋಪಿ ಪೊಲೀಸರಿಗೆ ಠಾಣೆಯಲ್ಲಿ ಹೇಳಿದ್ದಳು.

7). ಮೃತ ಮಂಜುಳಾ ಆಕೆಯ ಗಂಡನೊಂದಿಗೆ ಯಾವಾಗಲೂ ಜಗಳ ಮಾಡುತ್ತಿದ್ದಳು ಎಂದರೆ ಸರಿಯಲ್ಲ. ಮಾನಸಿಕ ಕಾರಣಗಳಿಂದ ಆಕೆ ಆತ್ಮಹತ್ಯೆ ಮಾಡಿಕೊಂಡಿರುವ ವಿಚಾರ ನನಗೆ ಗೊತ್ತಿದ್ದರೂ ಸಹಾ ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪೊಲೀಸರಿಗೆ ನಾನು ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೇನೂ ಗೊತ್ತಿಲ್ಲದೇ ಇದ್ದರೂ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು : 2ನೇ ಆರೋಪಿ ಪರ ಶ್ರೀ ಬಿ ಕೆ ಡಿ ವಕೀಲರಿಂದ
ಮೇಲಿನ ಪಾಟೀಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ